ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ

ನ್ಯಾಯಾಲಯ, ಗೋಕಾಕ

ಸಿ.ಸಿ.ನಂ.**3268/2018**

ಪಿರ್ಯಾದುದಾರರುಃ ಬಸವರಾಜ ದುಂಡಪ್ಪ ಜಿನರಾಳ,
ವಯಾಃ 42 ವರ್ಷ, ಉದ್ಯೋಗಃ ವ್ಯಾಪಾರ,
ವಾಸಃ ಗೋಕಾಕ, ತಾಃ ಗೋಕಾಕ.

- ವಿರುದ್ಧ -

ಆರೋಪಿಃ ಸಂಗಮೇಶ ಸದಾಶಿವಯ್ಯ ಹಿರೇಮಠ,
ವಯಾಃ 40 ವರ್ಷ, ಉದ್ಯೋಗಃ ವ್ಯಾಪರ,
ವಾಸಃ ಗೋಕಾಕ, ತಾಃ ಗೋಕಾಕ.

**ಆಪಾದನೆ**

ಶ್ರೀ ರಾಜೀವ ಗೋಳಸಾರ**,** ಬಿ.ಎ.**,** ಎಲ್.ಎಲ್.ಎಂ.**,** ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ**,** ಗೋಕಾಕ**,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದುದಾರರು ಮತ್ತು ಆರೋಪಿತರಾದ ನೀವು ಗೋಕಾಕದ ವಾಸಿಗಳಾಗಿರುತ್ತೀರಿ. ಪಿರ್ಯಾದುದಾರರು ಹಾಗೂ ಆರೋಪಿತರಾದ ನೀವು ಫಾರ್ಮಸಿಗೆ ಸಂಬಂಧಿಸಿದ ವ್ಯಾಪಾರವನ್ನು ಮಾಡುತ್ತಿರುವುದರಿಂದ ಇಬ್ಬರೂ ಒಳ್ಳೆಯ ಸ್ನೇಹಿತರಾಗಿರುತ್ತೀರಿ. ಆರೋಪಿತರಾದ ನೀವು ಉಮಾ ಮೆಡಿಕಲ್ ಏಜೆನ್ಸಿಯ ಹೋಲ್‌ಸೇಲ್ ಫಾರ್ಮಸಿ ಡಿಸ್ಟ್ರಿಬ್ಯೂಟರ್ ಬಿಸಿನೆಸ್ ಮಾಡುತ್ತಿರುವಾಗ, ನಿಮ್ಮ ವ್ಯಾಪಾರದ ಹಣದ ಅಡಚಣೆಯ ಸಲುವಾಗಿ ಪಿರ್ಯಾದುದಾರರಿಗೆ ಜನವರಿ-2017 ರಂದು ತಮ್ಮ ಬಿಸಿನೆಸ್ ಸಲುವಾಗಿ ಹಣವನ್ನು ಇನ್ವೆಷ್ಟ ಮಾಡುವಂತೆ ಕೇಳಿಕೊಂಡಿರುತ್ತೀರಿ. ಪಿರ್ಯಾದುದಾರರು ಒಪ್ಪಿಕೊಂಡ ಮೇರೆಗೆ ಸದರಿ ಬಿಸಿನೆಸ್‌ನಲ್ಲಿ ಪಿರ್ಯಾದುದಾರರು ಹಾಗೂ ಆರೋಪಿತರಾದ ನೀವು ಪಾಲುದಾರರಾಗಿರುತ್ತೀರಿ. ನಂತರ ಪಿರ್ಯಾದುದಾರರು ಆರೋಪಿತರಾದ ನಿಮ್ಮ ಮಾತನ್ನು ನಂಬಿ ಪಾಲುದಾರರಾಗಲು ಒಪ್ಪಿಕೊಂಡ ಮೇರೆಗೆ ದಿಃ 23-01-2017 ರಂದು ಚೆಕ್ ನಂ.726834 ರಲ್ಲಿ ರೂ.2,00,000/-, ದಿಃ 04-02-2017 ರಂದು ಚೆಕ್ ನಂ.726835 ರಲ್ಲಿ ರೂ.6,00,000/-, ದಿಃ 14-02-2017 ರಂದು ಚೆಕ್ ನಂ.726837 ರಲ್ಲಿ ರೂ.3,00,000/- ಹಾಗೂ ದಿಃ 21-02-2017 ರಂದು ಚೆಕ್ ನಂ.726838 ರಲ್ಲಿ ರೂ.2,00,000/- ಗಳಂತೆ ಒಟ್ಟು ರೂ.13,00,000/- ಗಳನ್ನು ಚೆಕ್ ಮುಖಾಂತರ ಆರೋಪಿತರಾದ ನಿಮಗೆ ನೀಡಿರುತ್ತಾರೆ.

ನಂತರ ಆರೋಪಿತರಾದ ನೀವು ದಿಃ 28-03-2017 ರಂದು ಸದರಿ ಬಿಸಿನೆಸ್‌ಗೆ ಸಂಬಂಧಿಸಿದಂತೆ ಅಗ್ರಿಮೆಂಟ್ ಮಾಡಿಕೊಂಡು ಸಾಲಗಾರರಿಗೆ ಪಾವತಿಸುವ ಮೊದಲು ಪಿರ್ಯಾದುದಾರರಿಗೆ ಮರುಪಾವತಿ ಮಾಡುಬೇಕು ಎಂದು ಹಾಗೂ ಒಂದು ವೇಳೆ ಆರೋಪಿತರಾದ ನೀವು ನಿಮ್ಮ ಬಿಸಿನೆಸ್ ಅನ್ನು ಮುಚ್ಚಬೇಕಾದ ಸಂಧರ್ಭ ಬಂದಾಗ

ಯುನೈಟೆಡ್ ಫಂಡ್‌ನಿಂದ ಸಾಧಿಸಿದ ಟರ್ನ್ ಓವರ್‌ನ ಒಟ್ಟು 40% ಲಾಭವನ್ನು ಪಿರ್ಯಾದುದಾರರಿಗೆ ಪಾವತಿಸಲು ಒಪ್ಪಿಕೊಂಡಿರುತ್ತೀರಿ.

ನಂತರ ದಿಃ 08-08-2018 ರಂದು ಪಿರ್ಯಾದುದಾರರು ಆರೋಪಿತರಾದ ನಿಮ್ಮನ್ನು ಸದರಿ ಸಾಲದ ಹಣವನ್ನು ಮರಳಿ ನೀಡುವಂತೆ ಕೇಳಿದಾಗ ಆರೋಪಿತರಾದ ನೀವು ದಿಃ 08-08-2018 ರಂದು ರೂ.13,00,000/- ಗಳಿಗೆ ನಿಮ್ಮ ಖಾತೆ ಇರುವ ಹೆಚ್.ಡಿ.ಎಫ್.ಸಿ ಬ್ಯಾಂಕ್, ಶಾಖೆ ಗೋಕಾಕ, ಇಲ್ಲಿಗೆ ಸೇರಿದ ಚೆಕ್ ನಂ.001095 ನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ.

ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯಿರುವ ಕೆನರಾ ಬ್ಯಾಂಕ್, ಶಾಖೆ ಗೋಕಾಕ, ಇಲ್ಲಿಗೆ ದಿಃ 09-08-2018 ರಂದು ನಗದೀಕರಣಕ್ಕೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ "ಅಕೌಂಟ್ ಬ್ಲಾಕ್ಡ್ ಸಿಚುವೇಷನ್ ಕವರಡ್ 2215" (Account Blocked situation covered in 2125) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 10.08.2018 ರಂದು ಸದರಿ ಚೆಕ್ ಅಮಾನ್ಯಗೊಂಡಿರುತ್ತದೆ.

ನಂತರ ಪಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿಃ 05-09-2018 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದರೂ ಸಹಿತ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಸಂದಾಯ ಮಾಡದ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

## ಆರೋಪಿಯ ಹೇಳಿಕೆ

ಪ್ರಶ್ನೆ ನಂ.1. ಈಗ ನಿಮಗೆ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ ? ತಿಳಿಯಿತೇ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕಾ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ 04.08.2022 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸುತ್ತೇನೆ.

**(ರಾಜೀವ ಗೋಳಸಾರ)**
ಪ್ರಧಾನ ಪ್ರ.ದ.ನ್ಯಾ. ದಂ,
**ಗೋಕಾಕ.**